

ಅಂಗಳ. ಪ್ರಾಣ ತೆಗೆಯಬಲ್ಲ ಪತನ! ಕೆಳಕ್ಕೆ ಬಿದ್ದವನು ಸಾಯಲೇಬೇಕು! ಆಗಲೇ ತಮ್ಮಯ್ಯನಿಗೆ ತನ್ನ ಸ್ಥಿತಿಯ ಅರಿವಾಗಿದ್ದು. ಪ್ರವೀಣ ಆತ್ಮಹತ್ಯೆ ಮಾಡಿಕೊಂಡ ಎನ್ನಲು ತನ್ನಲ್ಲಿ ಯಾವ ಸಾಕ್ಷಿಯೂ ಇಲ್ಲ!

'ಎಂತಹ ಅಪಾಯದಲ್ಲಿ ಸಿಲುಕಿದ್ದೇನೆಂದು ಅರಿವಾದೊಡನೆ ಜಾಗ್ರತನಾದೆ. ಕೂಡಲೇ ಮೊಬೈಲ್ ಸ್ವಿಚ್ ಆಫ್ ಮಾಡಿ, ಮನೆಗೆ ಬೀಗ ಹಾಕಿ, ಬೈಕಿನಲ್ಲಿ ಹೊರಬಿದ್ದೆ. ಆಗಲೇ ಪ್ರವೀಣನ ದೇಹದ ಸುತ್ತ ಕೆಲವು ಜನ ನೆರೆದಿದ್ದರು. ಎತ್ತ ಹೋಗುವುದೆಂಬ ಯೋಚನೆಯಿರಲಿಲ್ಲ. ಹುಚ್ಚನಂತೆ ಅಲೆದೆ. ಎಲ್ಲಿಗಾದರೂ ಪರಾರಿಯಾಗೋಣ ಅನ್ನಿಸಿತು. ಆದರೆ ಪೊಲೀಸರಿಗೆ ಅನುಮಾನ ಹೆಚ್ಚುತ್ತದೆ ಅಂತ ಆ ಯೋಚನೆ ಬಿಟ್ಟು, ಮತ್ತೆ ಫ್ಲಾಟ್ ಕಡೆ ಹೋದೆ. ಆಗ ಹನ್ನೊಂದು ದಾಟಿತ್ತು. ಪೊಲೀಸ್ ಜೀಪೊಂದು ಅಲ್ಲಿತ್ತು. ಕೆಟ್ಟ ಕುತೂಹಲ. ಮೆಲ್ಲನೆ ಹೆಜ್ಜೆ ಹಾಕಿದೆ. ಕೆಳಗಡೆ ಯಾರೂ ಇರಲಿಲ್ಲ. ಮೆಲ್ಲನೆ